ದಿನಾಂಕ 09-01-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :

ಸೋಮಪ್ಪ ಮೇಲಗಿರಿ ಇವರು ನನ್ನ ಮುತ್ತಜ್ಜ ಇದ್ದಾರೆ. ಅವರಿಗೆ ನಾಲ್ಕು ಜನ ಮಕ್ಕಳು ಇದ್ದು, 1) ಯಲ್ಲಪ್ಪ 2) ವೆಂಕಪ್ಪ 3) ಗೋವಿಂದಪ್ಪ 4) ರಾಮಕೃಷ್ಣಪ್ಪ ಅನ್ನುವ ಮಕ್ಕಳು ಇದ್ದರು. ನಮ ಅಜ್ಜ ಯಲ್ಲಪ್ಪ 1981 ರಲ್ಲಿ ಮೃತಪಟ್ಟಿದ್ದಾರೆ. ಆತನ ಸಹೋದರ ವೆಂಕಪ್ಪ ಎನ್ನುವವರು 1975 ರಲ್ಲಿ ಮೃತ ಪಟ್ಟಿದ್ದಾರೆ. ಗೋವಿಂದಪ್ಪ ಎನ್ನುವವರು 1986 ರಲ್ಲಿ ಮೃತಪಟ್ಟಿದ್ದಾರೆ. ರಾಮಕೃಷ್ಣಪ್ಪ ಎನ್ನುವವರು 1990 ರಲ್ಲಿ ಮೃತಪಟ್ಟಿದ್ದಾರೆ. ನಮ್ಮ ತಂದೆ ಈಶ್ವರಪ್ಪ ಎನ್ನುವವರು 1998 ರಲ್ಲಿ ಮೃತಪಟ್ಟಿದ್ದಾರೆ. ನಮ್ಮ ತಂದೆಗೆ ನಾವು ಆರು ಜನ ಮಕ್ಕಳು ಇದ್ದೇವೆ. 1)ರಾದಾಲಕ್ಷ್ಮಿ 2) ವಿಜಯಲಕ್ಷ್ಮಿ 3) ರೇಣುಕಾ 4) ಯಲ್ಲಮ್ಮ 5) ಪರಶುರಾಮ 6)ವೆಂಕಟೇಶ ಅಂದರೆ ನಾನು ಇದ್ದೇವೆ. ಸೋಮಪ್ಪ ಮಂಜುನಾಥ ಮತ್ತು ಶ್ರೀಧರ ಎನ್ನುವವರು ನನ್ನ ತಂದೆಯ ಸಹೋದರರು ಇರುತ್ತಾರೆ. ಅದೇ ರೀತಿ ನಮ್ಮ ತಂದೆಗೆ ಐದು ಜನ ಸಹೋದರಿಯರು ಇದ್ದಾರೆ.

ನಮ್ಮ ಅಜ್ಜನ ಸಹೋದರ ವೆಂಕಪ್ಪ ಎನ್ನುವವರು ಮೃತಪಟ್ಟಿದ್ದು ಆತನಿಗೆ ಯಶೋಧಮ್ಮ ಎನ್ನುವ ಮಗಳು ಇದ್ದಾಳೆ. ಗೊವಿಂದಪ್ಪನಿಗೆ ಐದು ಜನ ಮಕ್ಕಳು ಇದ್ದಾರೆ. ಅವರೆಂದರೆ, 1) ಶ್ರೀನಿವಾಸ 2) ರಾಮಚಂದ್ರ 3) ಗಣಪತಿ 4) ಅನಂತ 5) ಶ್ರೀಲಕ್ಷ್ಮಿ ಅನುವವರು ಇದ್ದಾರೆ.

ನಮ್ಮ ಇನ್ನೊಬ್ಬ ಅಜ್ಜ ರಾಮಕೃಷ್ಣಪ್ಪನಿಗೆ ಆರು ಜನ ಮಕ್ಕಳು ಇದ್ದಾರೆ. ಅವರೆಂದರೆ, 1)ಲಕ್ಷ್ಮಿನಾರಾಯಣ 2) ದತ್ತಾತ್ರೇಯ 3) ಮಾರುತಿ 4) ಮಹಾಲಕ್ಷ್ಮಿ 5) ಯಲ್ಲಮ್ಮ 6) ಶಾರದಮ್ಮ ಎನ್ನುವವರು ಇದ್ದಾರೆ.

ಈ ದಾವೆಯನ್ನು 5 ನೇ ಪ್ರತಿವಾದಿಯು ಒಟ್ಟು ಕುಟುಂಬದ ಆಸ್ತಿಯನ್ನು ತಾನೇ 1 ನೇ ಪ್ರತಿವಾದಿಯ ಗಂಡ ಹಾಗೂ 2 ರಿಂದ 4 ನೇ ಪ್ರತಿವಾದಿಯರ ತಂದೆಯಿಂದ 2006 ರಲ್ಲಿ ಖರೀದಿಸಿದ್ದಾನೆ ಎಂದು ಈ ದಾವಾ ಸಲ್ಲಿದ್ದೇನೆ. 5 ನೇ ಪ್ರತಿವಾದಿಯು ಈ ದಾವೆಯಲ್ಲಿ ತಕರಾರು ಸಲ್ಲಿಸಿರುವುದಿಲ್ಲಾ. ಈಗ

ನನ್ನ ಮತ್ತು 5 ನೇ ಪ್ರತಿವಾದಿಯ ನಡುವೆ ಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ, ಈ ಹಿಂದೆ ಇತ್ತು. ಈ ದಾವಾ ಸಲ್ಲಿಸುವ ಕಾಲಕ್ಕೆ ನನ್ನ ಮತ್ತು 5 ನೇ ಪ್ರತಿವಾದಿಯ ನಡುವೆ ಭಿನ್ನಾಭಿಪ್ರಾಯ ಇತ್ತು. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಸರಿಯಾಗಿ ಹಂಚಿಕೆ ಮಾಡಿಕೊಂಡಿರುವುದಿಲ್ಲಾ, ಅದನ್ನು ಸರಿ ಮಾಡಿಕೊಡುವಂತೆ 5 ನೇ ಪ್ರತಿವಾದಿಯ ನಡುವೆ ಭಿನ್ನಾಭಿಪ್ರಾಯ ಇತ್ತು. ಸಾಕ್ಷಿ ಪುನಃ ದಾವಾ ಆಸ್ತಿಯ ಬಗ್ಗೆ 5 ನೇ ಪ್ರತಿವಾದಿಯ ನಡುವೆ ಭಿನ್ನಾಭಿಪ್ರಾಯ ಇತ್ತು ಅನ್ನುತ್ತಾರೆ. 5 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿಸುವಾಗ ಕರಾಕರಣೆ ಯಾದಿಯು ನಮ್ಮ ಅಜ್ಜ ವೆಂಕಪ್ಪನ ಹೆಸರಿನಲ್ಲಿ ಇತ್ತು. ಆ ದಾಖಲೆಯನ್ನು ಹಾಜರುಪಡಿಸಿದ್ದೇನೆ. 2006 ರಲ್ಲಿ 5 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸುವಾಗ 1 ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 4 ನೇ ಪ್ರತಿವಾದಿಯರ ತಂದೆಯ ಹೆಸರು ಕರಾಕರಣೆ ಯಾದಿಯಲ್ಲಿ ಮತ್ತು ಮಾಲ್ಕಿ ಆಸ್ತಿಯಾಗಿತ್ತು ಅಂದ್ರೆ ಸರಿಯಲ್ಲಾ. 5 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸುವಾಗ ಮೋಹನಚಂದ್ರ ಅವರ ಹೆಸರು ಇರುವುದನ್ನು ಖಚಿತಪಡಿಸಿಕೊಂಡು ಖರೀದಿಸಿದ್ದಾರೆ ಅಂದ್ರೆ ಸರಿಯಲ್ಲಾ. 5 ನೇ ಪ್ರತಿವಾದಿಯು ನಾನು ಖರೀದಿಸುವಾಗ ನನಗೆ ಮೋಸ ಆಗಿದೆ ಎಂದು ಯಾವುದೇ ದಾವಾ ಸಲ್ಲಿಸಿರುವುದಿಲ್ಲಾ.

1965 ರಲ್ಲಿ ನಮ್ಮ ಅಜ್ಜ ಮತ್ತು ಆತನ ಸಹೊದರರು ಕೆಲವು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಕೆಲವೊಂದು ಜಮೀನು ಹಾಗೂ ಮನೆಗಳನ್ನುವಿಭಾಗ ಮಾಡಿಕೊಂಡಿದ್ದು ಅವುಗಳ ಸರ್ವೆ ನಂಬರು ಮತ್ತು ಮನೆ ನಂಬರುಗಳನ್ನು ಹೇಳಲು ಬರುವುದಿಲ್ಲಾ. ಇನ್ನು ನಾಲ್ಕು ಆ್ತಗಳು ವಿಭಾಗ ಆಗದೇ ಉಳಿದುಕೊಂಡಿವೆ. ಸದರಿ ನಾಲ್ಕು ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲು ಪಾಲು ವಿಭಾಗ ಕೋರಿ ದಾವಾ ಸಲ್ಲಿಸಿರುವುದಿಲ್ಲಾ. ನಮ್ಮ ಅಜ್ಜ ಹಾಗೂ ನಮ್ಮ ಅಜ್ಜನ ಸಹೋದರರ ನಡುವೆ ಹಾಗೂ ನಮ್ಮ ತಂದೆ ಹಾಗೂ ನಮ್ಮ ಅಜ್ಜನ ಸಹೋದರರ ಮಕ್ಕಳು ಎಲ್ಲರೂ 1965 ರಿಂದ ಬೇರೆ ಬೇರೆಯಾಗಿ ವಾಸವಾಗಿದ್ದೇವೆ. 1965 ರಿಂದ ನಮ್ಮ ಅಜ್ಜ ಆತನ ಸಹೋದರರು ಬೇರೆ ಬೇರೆಯಾಗಿ ವಾಸವಾಗಿದ್ದೇವೆ. ನಂತರ ಹಂತ ಹಂತವಾಗಿ ಬೇರೆಯಾಗಿ ವಾಸವಾಗುತ್ತಾ ಬಂದಿದ್ದೇವೆ. 1984 ರಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆ.

ನನಗೆ ಈ ದಾವಾ ಸಲ್ಲಿಸಲು ಒಟ್ಟು ಕುಟುಂಬದ ಎಲ್ಲ ಸದಸ್ಯರು ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲಾ. ದಾವಾ ಆಸ್ತಿಯಲ್ಲಿ ನನ್ನ ಸಹೋದರರು ಮತ್ತು ನನ್ನ ಅಜ್ಜನ ಸಹೋದರರ ಮಕ್ಕಳ ಹಿತಾಸಕ್ತಿ ಇರುತ್ತದೆ. ಅವರೆಲ್ಲರೂ ಈ ದಾವೆಗೆ ಅವಶ್ಯಕ ಪಕ್ಷಗಾರರಾಗುತ್ತಾರೆ ಅಂದ್ರೆ ಸಾಕ್ಷಿಯು 3-4 ಜನ ಮಾತ್ರ ಈ ದಾವೆಗೆ ಅವಶ್ಯಕ ಪಕ್ಷಗಾರರಾಗುತ್ತಾರೆ ವೆಂಕಟೇಶ ಅಂದ್ರೆ ನಾನು, 5 ಮತ್ತು 6 ನೇ ಪ್ರತಿವಾದಿಯರು ಮತ್ತು ಪರಶುರಾಮ ಎನ್ನುವವರು ಈ ದಾವೆಗೆ ಅವಶ್ಯಕ ಪಕ್ಷಗಾರರಾಗುತ್ತಾರೆ. ಪರಶುರಾಮ ಎನ್ನುವವರು ನನ್ನ ಅಣ್ಣ ಇರುತ್ತಾನೆ. ನಾನು 5 ಮತ್ತು 6 ನೇ ಪ್ರತಿವಾದಿಯರನ್ನು ಹೊರತುಪಡಿಸಿ ಬೇರೆಯವರಿಗೆ ಯಾವುದೇ ಹಿತಾಸಕ್ತಿ ಇರುವುದಿಲ್ಲಾ. ಆ ರೀತಿ ದಾವೆಯಲ್ಲಿ ಹೇಳಿ ಬರೆಸಿರುವುದಿಲ್ಲಾ. ದಾವಾ ಆಸ್ತಿಯು ನನ್ನ ಮತ್ತು 5 ಮತ್ತು 6 ನೇ ಪ್ರತಿವಾದಿ ಯರ ಹಿಸ್ಸೆಗೆ ಹೋದ ಬಗ್ಗೆ ಯಾವುದೇ ವಿಭಾಗ ಪತ್ರದಲ್ಲಿ ನಮೂದಿಸಿರುವುದಿಲ್ಲ ನನಗಾಗಲೀ ನಮ್ಮ ಕುಟುಂಬದವರಿಗಾಗಲೀ ದಾವಾ ಆಸ್ತಿಯಲ್ಲಿ ಯಾವುದೇ ಹಿತಾಸಕ್ತಿ ಇರುವುದಿಲ್ಲಾ ಅಂದ್ರೆ ಸರಿಯಲ್ಲಾ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ